**ಸಾಕ್ಷಿಗೆ ದಿನಾಂಕಃ06-08-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: ವಾದಿ ಪರ ಶ್ರೀ. TNM ವಕೀಲರಿಂದ ::**

2023 ರ ವಿಧಾನಸಭೆ ಚುನಾವಣೆಯ ಸಮಯದಲ್ಲಿ ನಾನು ರಂಗೇನಹಳ್ಳಿಯ ಕರ್ನಾಟಕ ಪಬ್ಲಿಕ್ ಶಾಲೆಯ ಮುಖ್ಯ ಶಿಕ್ಷಕಿಯಾಗಿದ್ದೆ ಎಂದರೆ ಸರಿ. ಸದರಿ ಚುನಾವಣೆಯಲ್ಲಿ ನಮ್ಮ ಶಾಲೆ ಒಂದು pooling booth ಆಗಿತ್ತು ಎಂದರೆ ಸರಿ. ವಾದಿಗಳು ರಂಗೇನಹಳ್ಳಿ ಗ್ರಾಮದವರಾಗಿರುತ್ತಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. 1 ನೇ ವಾದಿಯು ಆಗಾಗ ನಮ್ಮ ಶಾಲೆಯ ಕ್ರಾಯಕ್ರಮಗಳಿಗೆ ಬರುತ್ತಿದ್ದು ಆದಕಾರಣ ಅವರ ಪರಿಚಯ ನನಗೆ ಇರುತ್ತದೆ. 2 ಮತ್ತು 3 ನೇ ವಾದಿಗಳ ಪರಿಚಯ ಇರುವುದಿಲ್ಲ. 1 ನೇ ವಾದಿಯು ನಮ್ಮ ಶಾಲೆಯ ಅನೇಕ ಮಕ್ಕಳಿಗೆ ಆರ್ಥಿಕ ಸಹಾಯ ಮಾಡಿರುತ್ತಾರೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. 1 ನೇ ವಾದಿಯನ್ನು ನಮ್ಮ ಶಾಲೆಯ ಕ್ರಾಯಕ್ರಮಗಳಿಗೆ ಮುಖ್ಯ ಅತಿಥಿಯಾಗಿ ಕರೆಯುತ್ತಿದ್ದೇವು ಎಂದರೆ ಸಾಕ್ಷಿಯು ಅವರೇ ನನ್ನನ್ನು ಕ್ರಾಯಕ್ರಮಗಳಿಗೆ ಮುಖ್ಯ ಅತಿಥಿಯಾಗಿ ಕರೆಯುವಂತೆ ಹೇಳುತ್ತಿದ್ದರು ಎಂದು ನುಡಿಯುತ್ತಾರೆ. ನಾನು ಸದರಿ ಶಾಲೆಯಲ್ಲಿ 4 ವರ್ಷ 27 ದಿನಗಳ ಕಾಲ ಮುಖ್ಯ ಶಿಕ್ಷಕಿಯಾಗಿ ಕೆಲಸ ಮಾಡಿರುತ್ತೇನೆ. ಸದರಿ ಸಮಯದಲ್ಲಿ 1 ನೇ ವಾದಿಯು ನನ್ನನ್ನು 2-3 ಬಾರಿ ಭೇಟಿ ಮಾಡಿರುತ್ತಾರೆ.

1 ನೇ ವಾದಿಯ ತಂದೆಯ ಹೆಸರಿನಲ್ಲಿ ಒಂದು ಟ್ರಸ್ಟ್ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಟ್ರಸ್ಟ್ ಅಡಿಯಲ್ಲಿ 1 ನೇ ವಾದಿ ನಮ್ಮ ಶಾಲೆಯ ಮಕ್ಕಳಿಗೆ ಆರ್ಥಿಕ ಸಹಾಯ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಹಿಂದೆ ಮಾಡಿರಬಹುದು ನನ್ನ ಅವಧಿಯಲ್ಲಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ನಮ್ಮ ಶಾಲೆಯಲ್ಲಿ ಹಿಂದೆ ನಡೆದ ಕಾರ್ಯಕ್ರಮದ ಬಗ್ಗೆ ನನಗೆ ತಿಳಿದಿರುವುದಿಲ್ಲ. ನಾನು ಅದರ ಬಗ್ಗೆ ಪರಿಶೀಲನೆ ಸಹ ಮಾಡಿರುವುದಿಲ್ಲ. ನಾನು ಸದರಿ ಶಾಲೆಯ ಮುಖ್ಯ ಶಿಕ್ಷಕಿಯಾಗಿ ಅಧಿಕಾರ ವಹಿಸಿಕೊಂಡ ಸಮಯದಲ್ಲಿ ಆ ಬಗ್ಗೆ ನನ್ನ ಗಮನಕ್ಕೆ ಯಾವುದೇ ವಿಚಾರ ಬಂದಿರುವುದಿಲ್ಲ. ನಮ್ಮ ಶಾಲೆಯಲ್ಲಿ SDMC meeting ಗಳು ನಡೆಯುತ್ತಿದ್ದವು ಎಂದರೆ ಸಾಕ್ಷಿಯು ದಿನಾಂಕ 26.10.2022 ರಿಂದ ಎಲ್ಲಾ SDMC meeting ಗಳು ಸರ್ಕಾರಿ ಪಿ ಯು ಕಾಲೇಜ್ ನಲ್ಲಿ ಎಂ ಎಲ್ ಎ ರವರ ಅಧ್ಯಕ್ಷತೆಯಲ್ಲಿ ನಡೆದಿರುತ್ತವೆ ಎಂದು ನುಡಿಯುತ್ತಾರೆ. ನಾನು ಹೇಳುತ್ತಿರುವ ಪಿ ಯು ಕಾಲೇಜ್ ನಮ್ಮ

ಶಾಲೆಯ ಪಕ್ಕದಲ್ಲಿಯೇ ಇರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆದರೆ ಆಡಳಿತ ಬೇರೆ ಬೇರೆ ಇರುತ್ತದೆ ಎಂದು ನುಡಿಯುತ್ತಾರೆ. ಪಿ ಯು ಕಾಲೇಜ್ ಮತ್ತು ನಮ್ಮ ಶಾಲೆಗೆ ಒಂದೇ ಸಭಾಂಗಣದ ವೇದಿಕೆ ಇರುತ್ತದೆ ಎಂದರೆ ಸಾಕ್ಷಿಯು ಬೇರೆ ಬೇರೆ ಇರುತ್ತದೆ ಎಂದು ನುಡಿಯುತ್ತಾರೆ. ನಾನು ಮುಖ್ಯ ಶಿಕ್ಷಕಿಯಾಗಿದ್ದಾಗ ಒಂದಲು ಸುಸಜ್ಜಿತವಾದ ಸಭಾಂಗಣದ ವೇದಿಕೆ ನಮ್ಮ ಶಾಲೆಗೆ ಇತ್ತು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದನ್ನು ಸರ್ಕಾರ ನಿರ್ಮಾಣ ಮಾಡಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಸಭಾಂಗಣದ ವೇದಿಕೆಯನ್ನು ನಮ್ಮ ಶಾಲೆಯ ಮಕ್ಕಳು ಓದಲು ಮತ್ತು ಬೇರೆ ಕಾರ್ಯಕ್ರಮಕ್ಕೆ ಬಳಸಲಾಗುತ್ತಿತ್ತು ಎಂದರೆ ಸಾಕ್ಷಿಯ ಕೇವಲ ಕಾರ್ಯಕ್ರಮಕ್ಕೆ ಬಳಸಲಾಗುತ್ತಿತ್ತು ಎಂದು ನುಡಿಯುತ್ತಾರೆ. ಸದರಿ ಸಭಾಂಗಣದ ಅಳತೆ ನನಗೆ ಗೊತ್ತಿಲ್ಲ.  ಸದರಿ ಸಭಾಂಗಣದ ಅಂದಾಜು ಅಳತೆ ಸಹ ನನಗೆ ಹೇಳಲು ಬರುವುದಿಲ್ಲ. ನಾನು ಮುಖ್ಯ ಶಿಕ್ಷಕಿಯಾಗಿದ್ದ ಅವಧಿಯಲ್ಲಿ ಸದರಿ ವೇದಿಕೆ ಸುಸ್ಥಿತಿಯಲ್ಲಿ ಇತ್ತು ಎಂದರೆ ಸಾಕ್ಷಿಯು ಅದು ಹಾಳಾದ ಸ್ಥಿತಿಯಲ್ಲಿ ಇತ್ತು ಎಂದು ನುಡಿದಿರುತ್ತಾರೆ. ನಾನು ಹೇಳುತ್ತಿರುವ ಸಭಾಂಗಣದ ವೇದಿಕೆ ಸರ್ಕಾರದಿಂದ ನಿರ್ಮಾಣ ಮಾಡಲಾಗಿರುತ್ತದೆ ಎಂಬ ಬಗ್ಗೆ ನಾನು ದಾಖಲೆ ನೋಡಿರುವುದಿಲ್ಲ. ಸದರಿ ಸಭಾಂಗಣದ ವೇದಿಕೆಯನ್ನು ಯಾರು ನಿರ್ಮಾಣ ಮಾಡಿರುತ್ತಾರೆ ಮತ್ತು ಅದರ ನಿರ್ಮಾಣಕ್ಕೆ ಯಾರು ಹಣ ಸಹಾಯ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ವಿಚಾರದ ಬಗ್ಗೆ ಪರಿಶೀಲನೆ ಸಹ ಮಾಡಿರುವುದಿಲ್ಲ.

ಸದರಿ ಸಭಾಂಗಣದ ವೇದಿಕೆಯನ್ನು  1 ನೇ ವಾದಿಯು ಅವರ ಸ್ವಂತ ಹಣದಿಂದ ನಿರ್ಮಾಣ ಮಾಡಿರುತ್ತಾರೆ ಎಂದರೆ ನನಗೆ ಅದರ ಬಗ್ಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ. ನಾನು ಮುಖ್ಯ ಶಿಕ್ಷಕಿಯಾದ ಕಾರಣ ನಮ್ಮ ಶಾಲೆಯ ಯಾವುದೇ ಕಟ್ಟಡ ಅಥವಾ ಸಭಾಂಗಣದ ವೇದಿಕೆ ಹಾಳಾದ್ದಲ್ಲಿ ನನ್ನ ಗಮನಕ್ಕೆ ಬರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ವಿಚಾರದ ಬಗ್ಗೆ ನಾವು ಸರ್ಕಾರಕ್ಕೆ ತಿಳಿಸುತ್ತೇವೆಂದು ನುಡಿಯುತ್ತಾರೆ. ನಮ್ಮ ಶಾಲೆಯಲ್ಲಿ ಇದ್ದ ಸಭಾಂಗಣದ ವೇದಿಕೆಗೆ short circuit ಆಗಿರುತ್ತದೆ, ಆದರೆ ಯಾವ ದಿನಾಂಕದಂದು ಆಗಿರುತ್ತದೆ ಎಂದು ನನಗೆ ಈಗ ನೆನಪಿಲ್ಲ. ಸದರಿ short circuit ಹೊರತುಪಡಿಸಿ ಸದರಿ ಸಭಾಂಗಣಕ್ಕೆ ಬೇರೆ ಯಾವುದೇ ಹಾನಿಯಾಗಿರುವುದಿಲ್ಲ.

ವಾದಿ ಹಾಜರುಪಡಿಸಿರುವ ನಿಪಿ1 ಫೋಟೋದಲ್ಲಿ ಕಂಡು ಬರುವ ಶಾಲೆ ನಮ್ಮ ಶಾಲೆ ಆಗಿರುತ್ತದೆ ಎಂದರೆ ಸರಿ. ನಿಪಿ5 ಫೋಟೋದಲ್ಲಿ ಇರುವ ನಮ್ಮ ಶಾಲೆ ಕೊಠಡಿ ಆಗಿರುತ್ತದೆ

ಆದರೆ ಅದರ ಮೇಲೆ ಇರುವ ಹೆಸರಿನ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ5 ಪೋಟೋದಲ್ಲಿ 1 ನೇ ವಾದಿಯ ತಂದೆ ಹೆಸರಿದ್ದು ಅದನ್ನು ನಿರ್ಮಾಣ ಮಾಡಲು 1 ನೇ ವಾದಿಯ ತಂದೆ ಹಣ ಸಹಾಯ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ7 ಮತ್ತು 8 ರಲ್ಲಿ ಕಂಡು ಬರುವ ಸಭಾಂಗಣದ ವೇದಿಕೆ ನಮ್ಮ ಶಾಲೆಯದ್ದಾಗಿತ್ತು ಎಂದರೆ ಸರಿ. ನಿಪಿ8 ರಲ್ಲಿ ಇರುವ ನಾಮಫಲಕದ ಬಗ್ಗೆ ನನಗೆ ಗೊತ್ತಿಲ್ಲ.

ನಿಪಿ7 ಮತ್ತು 8 ಪೋಟೋಗಳಲ್ಲಿ ಇರುವ ವೇದಿಕೆಯಲ್ಲಿನ ಸ್ವಲ್ಪ ಭಾಗ ತೆರವುಗೊಳಿಸಿ ಕೊಠಡಿಗಳನ್ನು ನಿರ್ಮಾಣ ಮಾಡಲಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದರಲ್ಲಿ ನನ್ನ ಯಾವುದೇ ಪಾತ್ರ ಇರುವುದಿಲ್ಲ ಅದು SDMC ಯ ನಿರ್ಣಯ ಆಗಿರುತ್ತದೆ ಎಂದು ನುಡಿದಿರುತ್ತಾರೆ.

ಸದರಿ ವೇದಿಕೆ ತೆರವುಗೊಳಿಸುವಲ್ಲಿ ನನ್ನದು ನಿರ್ಲಕ್ಷ್ಯ ಇರುತ್ತದೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲಾತಿಗಳಿಗೂ ಹಾಗೂ ಈ ದಾವೆಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

sd/-
(ರಾಹುಲ್ ಶೆಟ್ಟಿಗಾರ್)
ಪ್ರಧಾನ ಸಿ.ಜೆ ಮತ್ತು ಜೆ.ಎಂ.ಎಫ್.ಸಿ
ತರೀಕೆರೆ.

ಸಾಕ್ಷಿಯ ಸಹಿ: